# ಶುಭವಾಸ್ತು


ಸುರೇಶ್ ಸಿದ್ಧಾಂತಿ
ಸೆಲ್: 0-98481 14778
ಶ್ರೀಶೈಲ, ಆಂಧ್ರಪ್ರದೇಶ


www.subhavaastu.com

ಎಲ್ಲವೂ ಶುಭವೇ ನಡೆಯಲಿ, ನಡೆಯಬೇಕೆಂಬ ಉದ್ದೇಶದಿಂದ ಸಂಸ್ಥೆಯ ಹೆಸರನ್ನು ಶುಭವಾಸ್ತು ಎಂದು ನಿರ್ಣಯಿಸಲಾಗಿದೆ. 1992ನೇ ಸಂವತ್ಸರದಲ್ಲಿ ವಾಸ್ತು ನೋಡಲು ಪ್ರಾರಂಭಿಸಿದೆ. ಅಂದಿನಿಂದ ಇಂದಿನವರೆಗೂ ವಾಸ್ತು ಪರಿಶೀಲಿಸಿಕೊಂಡವರೆಲ್ಲರೂ ಅಭಿವೃದ್ಧಿ ಹೊಂದಿದರು. ಇಲ್ಲಿಯವರೆಗೂ ಶುಭವಾಸ್ತುವಿನ ಕುರಿತು ಪ್ರಚಾರ ಮಾಡುವುದೆನ್ನುವುದು ನಡೆದಿಲ್ಲ, ನನ್ನಿಂದ ವಾಸ್ತು ತೋರಿಸಿಕೊಂಡವರೆಲ್ಲ ಅಭಿವೃದ್ಧಿ ಹೊಂದಿ, ಅವರ ಬಂಧುಗಳಿಗೆ ಮತ್ತು ಸ್ನೇಹಿತರಿಗೆ ನನ್ನ ಕುರಿತು ತಿಳಿಸಿ, ನನ್ನನ್ನು ಆಹ್ವಾನಿಸಿ ವಾಸ್ತು ತೋರಿಸಿಕೊಳ್ಳುತ್ತಿದ್ದರು. ಹಾಗೆ 1992ನೇ ಇಸವಿಯಿಂದ ಇಲ್ಲಿಯ ವರೆಗೂ ಇದೇ ರೀತಿ ನಡೆಯುತ್ತಿದೆ. ನನ್ನನ್ನು ಇಲ್ಲಿಯವರೆಗೂ ಆದರಿಸಿದ ಆತ್ಮೀಯರೆಲ್ಲರಿಗೂ ಹೃದಯಪೂರ್ವಕ ಅಭಿನಂದನೆಗಳು. ಶುಭವಾಸ್ತು.ಕಾಮ್ ಅನ್ನು 2003ನೇ ಇಸವಿಯಲ್ಲಿ ಪ್ರಾರಂಭಿಸಿದೆವು. 2006 ನವೆಂಬರ್ ತಿಂಗಳಲ್ಲಿ ವೆಬ್‌ಸೈಟ್ ಪರಿಷ್ಕರಿಸಿದೆವು. ವಿದೇಶಗಳಲ್ಲಿ ನೆಲೆಸಿರುವ ಗ್ರಾಹಕರು ವೈಬ್‌ಸೈಟ್ ಅನ್ನು ಮತ್ತಷ್ಟು ಅಭಿವೃದ್ಧಿ ಪಡಿಸುವಂತೆ ಕೋರಿದ್ದರಿಂದ, ಹತ್ತಾರು ಜನಕ್ಕೆ ವಾಸ್ತುವಿನ ಕುರಿತು ಸಂಪೂರ್ಣ ತಿಳಿಯಲೆಂಬ ಉದ್ದೇಶದಿಂದ, ಪುನರ್‌ನಿರ್ಮಾಣ ಮಾಡುವಂತೆ ಪದೇಪದೇ ತಿಳಿಸಿದ್ದರಿಂದ ಇದರತ್ತ ಗಮನಹರಿಸಲಾಯಿತು. ಪ್ರಸ್ತುತ ಓದುತ್ತಿರುವ ನೀವೂ ಸಹ ಪರಿಪೂರ್ಣ ಹೃದಯದಿಂದ ಸಂಸ್ಥೆಯ ಅಭಿವೃದ್ಧಿಗೆ ಸಹಕಾರ ನೀಡಿ, ಆದರಿಸುವಿರೆಂದು ಮತ್ತು ನಿಮ್ಮ ಸ್ನೇಹಿತರಿಗೆ, ಬಂಧುಗಳೆಲ್ಲರಿಗೂ ಈ ವೆಬ್‌ಸೈಟ್ ಕುರಿತು ತಿಳಿಸಿ, ಅಗತ್ಯ ಪ್ರೋತ್ಸಾಹ ನೀಡುವಿರೆಂಬ ವಿಶ್ವಾಸವಿದೆ.

ಮೊದಲಿಗೆ ವಾಸ್ತು ಶಾಸ್ತ್ರದ ಕುರಿತು ತಿಳಿದುಕೊಳ್ಳೋಣ.

ವಾಸ್ತುಶಾಸ್ತ್ರ ಎಂಬುದು ನಾವು ವಾಸಿಸುವ ಮನೆಯ ನಿರ್ಮಾಣ ವಿಧಾನವನ್ನು ಆಧರಿಸಿರುತ್ತದೆ. ನಾವು ಒಂದು ಮನೆಯಲ್ಲಿ ವಾಸಿಸುತ್ತಿರುತ್ತೇವೆ. ಆ ಮನೆ ವಾಸ್ತುರೀತ್ಯ ನಿರ್ಮಿಸಿಲ್ಲ ಎಂದುಕೊಳ್ಳುತ್ತೀರಿ. ನಮಗೆ ವಾಸ್ತುಶಾಸ್ತ್ರದ ಕುರಿತು ಏನೇನೂ ತಿಳಿಯದು. ಕೆಲವು ದಿನಗಳ ನಂತರ ಆ ಮನೆಯಲ್ಲಿ ನಾವು ಅನೇಕ ಕಷ್ಟ-ನಷ್ಟಗಳನ್ನು ಅನುಭವಿಸುತ್ತೇವೆ. ಇಂಥ ಪರಿಸ್ಥಿತಿಯಲ್ಲಿ ವಾಸ್ತುಶಾಸ್ತ್ರದ ನೆರವು ಪಡೆಯುವುದರಿಂದ ನಮ್ಮ ಕಷ್ಟಗಳೆಲ್ಲ ನಿವಾರಣೆಯಾಗಿ ಸಂಪೂರ್ಣ ಆನಂದ ಅನುಭವಿಸಬಲ್ಲೆವು. ವಾಸ್ತು ಶಾಸ್ತ್ರ ಸಹಾಯ ಅಂದರೆ— ಒಂದು ನಿರ್ಮಾಣ ವಿಧಾನ ಅಥವಾ ಪದ್ಧತಿ. ಮನೆಯಲ್ಲಿ ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಳ್ಳುವುದರ ಮೂಲಕ ಊಹಿಸದ ಫಲಿತಾಂಶಗಳನ್ನು ಹೊಂದಬಹುದು. ನಿಮಗೆ ಈ ಶಾಸ್ತ್ರದ ಕುರಿತು ಅರ್ಥಮಾಡಿಕೊಳ್ಳಲು ಇಲ್ಲಿ ಕೊಟ್ಟಿರುವ ಎರಡು ಮಾದರಿ ಚಿತ್ರಗಳನ್ನು ಗಮನಿಸಿ.



ದಯವಿಟ್ಟು, 1ನೇ ನಕ್ಷೆಯಲ್ಲಿ ದ್ವಾರಗಳು(ಬಾಗಿಲು– ಡೋರ್) ಎಲ್ಲಿ, ಹೇಗೆ ಇವೆಯೋ ಗಮನಿಸಿ. ಮನೆಯಿಂದ ಹೊರಗೆ ಹೋಗುವ ಬಾಗಿಲನ್ನು ಗಮನಿಸಬೇಕು. ಈ ಬಾಗಿಲು ಮನೆಗೆ ಪೂರ್ವ ಆಗ್ನೇಯದಲ್ಲಿದೆ. ಈ ರೀತಿಯಾಗಿ ಪೂರ್ವ ಆಗ್ನೇಯದಲ್ಲಿ ಬಾಗಿಲು ಇರುವುದರಿಂದ ಅನೇಕ ಕಷ್ಟಗಳನ್ನು ಆ ಮನೆಯಲ್ಲಿ ವಾಸಿಸುವ ಗೃಹಸ್ಥರು ಅನುಭವಿಸಬೇಕಾಗುತ್ತದೆ.

ಉದಾಹರಣೆಗೆ : ವೃತ್ತಿಯಲ್ಲಿ ಅಡೆ-ತಡೆಗಳು, ಕೋಪ, ಚೋರಭಯ, ಅಗ್ನಿ ಪ್ರಮಾದ, ಅಪಘಾತಗಳು ಆಗುವುದು, ಇನ್ನೇನು ಚೆನ್ನಾಗಿದ್ದೇವೆ ಅಂದುಕೊಳ್ಳುವಷ್ಟರಲ್ಲಿ ಯಾವುದೋ ಒಂದು ಕಷ್ಟ ತಲೆಯ ಮೇಲೆ ಬೀಳುವುದು, ವಿದ್ಯೆಗೆ ಅಡೆ-ತಡೆಗಳು, ಮೋಸ ಮಾಡಿ ಬದುಕುವುದು ಇಲ್ಲವೇ ಮೋಸಗಾರರಿಂದ ಮೋಸಕ್ಕೆ ಒಳಗಾಗುವುದು, ನಕಲಿ ಪ್ರಮಾಣಪತ್ರ ಹೊಂದುವುದು, ಅಧಿಕ ಖರ್ಚು, ಕೋರ್ಟು ತಕರಾರು, ಕುಟುಂಬದಲ್ಲಿ ಇರುವವರೊಂದಿಗೆ ಪರಸ್ಪರ ಅವಗಾಹನೆಯ ಕೊರತೆ ಉಂಟಾಗುವುದು, ವಿದೇಶಕ್ಕೆ ಹೋಗಬೇಕೆಂದುಕೊಂಡು ಹೋಗಲಾಗದೇ ಇರುವುದು, ಗೌರವದಿಂದ ಬದುಕಬೇಕೆಂದುಕೊಂಡರೂ ಯಾವುದೋ ಒಂದು ರೀತಿಯಲ್ಲಿ ಅಗೌರವಕ್ಕೆ ಗುರಿಯಾಗುವುದು, ಅವಮಾನ, ನಿರಂತರ ಕ್ಷೋಭೆ, ಉದ್ರೇಕ, ಅಸಹನೆ, ಹೆಚ್ಚುಗಾರಿಕೆ ತೋರಿಸುವುದು, ಇತರರು ತೋರುವ ಸಹಾನುಭೂತಿಗಾಗಿ ನಿರೀಕ್ಷಿಸುವುದು, ಹಸಿವೆ, ದುರಭ್ಯಾಸ, ಸಿಗರೆಟ್, ಮದ್ಯ, ಸ್ತ್ರೀಸಂಗದ ಹುಚ್ಚು, ಇಸ್ಪೀಟ್ ಆಡುವುದು, ಇನ್ನಿತರವುಗಳಿಂದ ಪೀಡನೆಗೊಳಗಾಗುವುದು ನಡೆಯುತ್ತದೆ.

ಈಗ ವಾಸ್ತುಶಾಸ್ತ್ರ ಸಹಾಯದಿಂದ ಮನೆಯಲ್ಲಿ ಸಣ್ಣಪುಟ್ಟ ಬದಲಾವಣೆಯನ್ನು ಮಾಡುವುದರಿಂದ ಹೇಗಿರುತ್ತದೋ ನೋಡೋಣ...

ಈಗ ಕೇವಲ ಒಂದು ಬಾಗಿಲನ್ನು ಬದಲಾಯಿಸುವುದರಿಂದ ಎಂತಹ ಕಷ್ಟಗಳಿಂದ ಹೊರಬಿದ್ದು ಉತ್ತಮ ಫಲಗಳನ್ನು ಹೇಗೆ ಪಡೆಯಬಹುದೋ ನೋಡಿ...

ಮನೆಯಿಂದ ಹೊರಬರುವ ಬಾಗಿಲನ್ನು (ಪೂರ್ವ ಆಗ್ನೇಯ ಬಾಗಿಲನ್ನು) ಪೂರ್ವ ಈಶಾನ್ಯಕ್ಕೆ ಬದಲಾಯಿಸುವುದರಿಂದ (2ನೇ ನಕ್ಷೆಯನ್ನು ಗಮನಿಸಿ) ಕೇಡುಗಳೆಲ್ಲ ನಿವಾರಣೆಯಾಗಿ ಒಳ್ಳೆಯದಾಗುವುದು. ಉದಾಹರಣೆಗೆ : ಗೌರವ, ಧನ, ಕೀರ್ತಿ, ಅಧಿಕಾರ, ಅಭಿವೃದ್ಧಿ, ಮಕ್ಕಳು ವಿದ್ಯಾಭ್ಯಾಸದಲ್ಲಿ ಹೆಚ್ಚು ಆಸಕ್ತಿ ವಹಿಸಿ ಓದಿ, ಉನ್ನತ ಶಿಕ್ಷಣಕ್ಕೆ ಸಜ್ಜಾಗುವರು ಗೆಲವು ಸಾಧಿಸುವರು, ವಿದೇಶಿ ಪ್ರಯಾಣ, ದೂರ ಪ್ರದೇಶಗಳಿಗೆ ಪ್ರಯಾಣ, ಲಾಭ, ಶುಭ, ಸುಖ, ಸಂತೋಷ, ಆನಂದ, ಸಂತೋಷ, ಬಣ್ಣಬಣ್ಣದ ಪ್ರಪಂಚ... ಎಲ್ಲವೂ ಸಂತೋಷವೇ...

ಈಗ ನೀವು ತಿಳಿದುಕೊಂಡಿದ್ದು ಸಾಗರದಂಥ ವಾಸ್ತುಶಾಸ್ತ್ರದಲ್ಲಿನ ನೀರಿನ ಬಿಂದುವಿನ ಪ್ರಮಾಣದಷ್ಟು. ಇನ್ನೂ ತಿಳಿದುಕೊಳ್ಳಬೇಕಾದ್ದು ಬಹಳಷ್ಟಿದೆ. ವಾಸ್ತುಶಾಸ್ತ್ರದ ಸಹಾಯ ಪಡೆದು ಅನೇಕ ಕಷ್ಟ, ತೊಂದರೆಗಳಿಂದ ನಾವು ಹೊರಬೀಳಬಹುದು. ಇದು ಶಾಸ್ತ್ರ ನಿರೂಪಿತವಾದಂಥದ್ದು. ಮೊದಲಿಗೆ ದೋಷಗಳು ಎಂಥವೋ ತಿಳಿದುಕೊಳ್ಳೋಣ. ವಾಸ್ತುಶಾಸ್ತ್ರದ ನೆರವಿನ ಮೂಲಕ ನಾವು ಈಗ ತಿಳಿದುಕೊಳ್ಳುವ ದೋಷಗಳಿಂದ ಸಂಪೂರ್ಣ ಮುಕ್ತರಾಗಬಹುದು.

ವಾಸ್ತುದೋಷಗಳೆಂಬುವವು ಈ ರೀತಿ ಇರುತ್ತವೆ.

ಸಾಲ ಮಾಡುವುದು, ಸಾಲ ಹೆಚ್ಚಾಗುವುದು, ಸಾಲ ತೀರಿಸಲು ಸಾಲ ಮಾಡುವುದು, ಜೀವನಪರ್ಯಂತ ಸಂಪಾದನೆ ಮಾಡಿದರೂ ಕರಗದ ಸಾಲ, ಕೃಶರಾಗುವುದು, ಆತ್ಮಹತ್ಯೆಗಳು, ಆತ್ಮಹತ್ಯೆಗೆ ಪ್ರಯತ್ನಿಸುವುದು, ಉದ್ವೇಗ, ಮಾನಸಿಕ ಕ್ಷೋಭೆ, ಮುಗಿಯದ ವ್ಯಥೆ, ಜಗಳಗಳು, ಕೋರ್ಟು ತಕರಾರುಗಳು, ಕುಟುಂಬದಲ್ಲಿ ಬೇಸರ ಮೂಡಿಸುವ ಕಲಹಗಳು, ಗಂಡ-ಹೆಂಡಿರ ನಡುವೆ ಜಗಳ, ಮಕ್ಕಳಿಗೆ ಸರಿಯಾಗಿ ವಿದ್ಯೆ ಹತ್ತದಿರುವುದು, ಮಕ್ಕಳು ಬೆಳೆಯದಿರುವುದು, ಸಂತಾನಹೀನತೆ, ಮೃತ ಅಥವಾ ಅಂಗವೈಕಲ್ಯ ಶಿಶುವಿನ ಜನನ, ರೋಗಗಳು, ವ್ಯಾಪಾರಗಳು ಸರಿಯಾಗಿ ನಡೆಯದೇ ಹೋಗುವುದು, ಹಾಕಿದ ಬಂಡವಾಳಕ್ಕೆ ಕನಿಷ್ಠ ಬಡ್ಡಿಯೂ ಸಿಗದೇಹೋಗುವುದು, ಮಾನಸಿಕ ವ್ಯಾಕುಲತೆ, ಪಾಲುದಾರರ ಸಮಸ್ಯೆಗಳು, ವ್ಯವಹಾರಗಳು, ಭಯಂಕರ ರೋಗಗಳು, ಅನಾರೋಗ್ಯ, ಕ್ಯಾನ್ಸರ್, ಏಡ್ಸ್, ಪಕ್ಷವಾತ, ಹೃದಯಾಘಾತ, ರಕ್ತಹೀನತೆ, ಭಯದ ವಾತಾವರಣ, ಅವಮಾನಗಳು, ಬಿಕಾರಿಯಾಗುವುದು, ಸನ್ಯಾಸ ಪಡೆಯುವುದು, ಹುಚ್ಚು ಹಿಡಿಯುವುದು, ಅರ್ಧಂಬರ್ಧ ನಿಂತ ಪೂರ್ಣಗೊಳಿಸಲಾಗದ ಕೆಲಸಕ್ಕಾಗಿ ಹೋರಾಡುವುದು,

ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳುವುದು, ತಪ್ಪು ಕೆಲಸಗಳನ್ನು ಮಾಡಿ ಸಿಕ್ಕಿಬೀಳುವುದು, ವ್ಯಭಿಚಾರ, ಇತರ ಸ್ತ್ರೀಯರ ಮೇಲೆ ಕಾಮ, ಪ್ರಕೋಪಗಳು, ಕಟ್ಟಿಕೊಂಡ ಹೆಂಡತಿಯ ಮೇಲೆ ಎಗರಾಡುವುದು, ಕೋಪ, ಅಸಹ್ಯ, ಕುಟುಂಬದ ಸದಸ್ಯರಲ್ಲಿ ಯಾರಾದರೂ ಒಬ್ಬರ ಮೇಲೆ ಮತ್ತೊಬ್ಬರು ಕೇಡು ಮಾಡಬೇಕೆಂದು ಅಂದುಕೊಳ್ಳುವುದು, ದಾಳಿ ಮಾಡುವುದು, ಕೊಲ್ಲುವುದು, ಹತ್ಯೆಗೊಳಗಾಗುವುದು, ಹತ್ಯೆ ಮಾಡುವುದು. ಕಳ್ಳತನ, ಅಗ್ನಿ ಪ್ರಮಾದಗಳು, ಆಕಸ್ಮಿಕವಾಗಿ ಸಂಭವಿಸುವ ಅಪಾಯಗಳು, ಚರ್ಮರೋಗಗಳು, ಉದ್ಯೋಗ ದೊರೆಯದಿರುವುದು, ವಿದೇಶಕ್ಕೆ ಹೋಗಬೇಕೆಂದುಕೊಂಡು ಹೋಗಲಾರದೇ ಹೋಗುವುದು, ಇನ್ನಿತರ...

## ಹೆಣ್ಣುಮಕ್ಕಳ ವಿಷಯವಾಗಿ...

ಇತರರನ್ನು ಪ್ರೇಮಿಸುವುದು, ಓಡಿಹೋಗುವುದು, ಮದುವೆಯಾದ ನಂತರ ಹಿಂದಿನ ಪ್ರೇಮಿಯ ಜತೆ ಬೆರೆಯುವುದು, ತವರುಮನೆ ಸೇರುವುದು, ತವರುಮನೆಗೆ ಭಾರವಾಗುವುದು, ಮೆಟ್ಟಿದ ಮನೆಯಲ್ಲಿ ಕಷ್ಟಗಳನ್ನು ಅನುಭವಿಸಿ, ಗಂಡನ ಬಲವಂತದಿಂದ ತವರುಮನೆಯವರನ್ನು ಪೀಡಿಸುವುದು, ಇನ್ನೂ ಕೆಲವು ದೋಷಗಳು ಬರವಣಿಗೆಯ ರೂಪದಲ್ಲಿ ತಿಳಿಸಲು ಅಹಸ್ಯಕರವಾಗಿರುತ್ತವೆ. ಅಂಥ ದೋಷಗಳನ್ನು ಕೂಡ ವಾಸ್ತುರೀತ್ಯ ಬಗೆಹರಿಸಿಕೊಳ್ಳಬಹುದು.

ಇಂದು ವಿದೇಶಗಳಲ್ಲಿ ಭಾರತೀಯರು ದೊಡ್ಡ ದೊಡ್ಡ ಮನೆಗಳನ್ನು ಕೊಳ್ಳುವುದು ಮತ್ತು ಕಟ್ಟಿಸಿಕೊಳ್ಳುವುದು ನಡೆಯುತ್ತಿದೆ. ಭಾರತೀಯರ ಸಾಮರ್ಥ್ಯವೇನೋ ಪ್ರಪಂಚಕ್ಕೇ ಸಾರಿ ಹೇಳುತ್ತಿದ್ದಾರೆ. ಅಭಿವೃದ್ಧಿಯನ್ನು ಭಾರತದಲ್ಲಿ ಪ್ರದರ್ಶಿಸಲು ಅವಕಾಶ ಇಲ್ಲವಾದರೂ ವಿದೇಶಗಳಲ್ಲಿ, ತಮ್ಮ ಶಕ್ತಿ ಏನೋ ಜಗತ್ತಿಗೆಲ್ಲ ತಿಳಿಯುವಂತೆ ಮಾಡುತ್ತಿದ್ದಾರೆ. ಇವರಿಂದಾಗಿ ಭಾರತ ಹೆಮ್ಮೆ ಪಡುತ್ತಿದೆ. ಆದರೆ ವಾಸ್ತುಶಾಸ್ತ್ರದ ಕುರಿತು ತಿಳಿಯದ ಕೆಲವರು, ವಿದೇಶದಲ್ಲಿ ವಾಸಿಸುತ್ತಿರುವ ಕೆಲ ಭಾರತೀಯರು ವಾಸ್ತುರೀತ್ಯ ಮನೆಯನ್ನು ನಿರ್ಮಿಸಲಾಗದೆ ಆಕಸ್ಮಿಕವಾಗಿ ನಡೆಯುವ ಕೆಲವು ಘಟನೆಗಳಿಂದ ತಲ್ಲಣಗೊಳ್ಳುವುದು, ಹೇಳಲಾಗದಂಥ ಕಷ್ಟಗಳನ್ನು ಅನುಭವಿಸುವುದು ನಡೆಯುತ್ತಿದೆ.

ನಿಮಗಾಗಿ ವಾಸ್ತುಶಾಸ್ತ್ರದಿಂದ ಕೆಲವು ಸಣ್ಣ ಸೂಚನೆಗಳನ್ನು ಇಲ್ಲಿ ಕೊಡುತ್ತಿದ್ದೇನೆ, ಸ್ವೀಕರಿಸಿ.


## ಮನೆ(ಸ್ಥಳ) ಕೊಳ್ಳುವವರಿಗೆ :

ನಿಮಗೆ ಅನುಭವೀ ವಾಸ್ತುಶಾಸ್ತ್ರಜ್ಞ ಸಿಗದೇ ಹೋದರೆ ಕನಿಷ್ಠ ಈ ಕೆಳಗೆ ನೀಡಿರುವ ಅಂಶಗಳನ್ನು ಅನುಸರಿಸುವುದರಿಂದಲೂ ಒಳ್ಳೆಯದಾಗುತ್ತದೆಂದು, ಒಳ್ಳೆಯದು ನಡೆಯಲೆಂದು ಆಶಿಸುತ್ತ...

1. ಕೊಳ್ಳುವ ನಿವೇಶನದ ಈಶಾನ್ಯ ತುಂಡಾಗಿರಬಾರದು.
2. ದಕ್ಷಿಣ, ನೈಋತ್ಯ, ಪಶ್ಚಿಮ ದಿಕ್ಕುಗಳಲ್ಲಿ ಕಾಲುವೆ, ಸರೋವರ, ಗುಂಡಿಗಳು ಇರುವ ನಿವೇಶನ(ಸ್ಥಳ) ಕೊಳ್ಳಬಾರದು.
3. ಪೂರ್ವ ಮತ್ತು ಉತ್ತರ ತುಂಡಾಗಿರುವ ಸ್ಥಳಗಳು ಒಳ್ಳೆಯದಲ್ಲ.
4. ಪೂರ್ವ ಆಗ್ನೇಯಗಳು ಬೆಳೆದಿರುವ ಸ್ಥಳ ಅಶುಭಕರ.
5. ದಕ್ಷಿಣ, ಪಶ್ಚಿಮ, ನೈಋತ್ಯಗಳು ಬೆಳೆದ ಸ್ಥಳ ದಾರಿದ್ರ್ಯ.
6. ಪೂರ್ವ, ಉತ್ತರ, ಈಶಾನ್ಯಗಳು ಎತ್ತರವಾಗಿದ್ದು ; ದಕ್ಷಿಣ, ಪಶ್ಚಿಮ, ನೈಋತ್ಯಗಳಿಗೆ ಇಂಚಿನಷ್ಟಾಗಲಿ ಹಳ್ಳವಾಗಿದ್ದರೆ ಅಂತಹ ನಿವೇಶನಗಳು – ಚಂಡಾಲ ಸ್ಥಳಗಳು.
7. ಉತ್ತರ ವಾಯುವ್ಯಗಳು ಬೆಳೆದ ಸ್ಥಳಗಳು ದೋಷಪೂರ್ಣ.
8. ಪೂರ್ವ ಆಗ್ನೇಯ, ದಕ್ಷಿಣ ನೈಋತ್ಯ, ಪಶ್ಚಿಮ ನೈಋತ್ಯ, ಉತ್ತರ ವಾಯುವ್ಯ ಬೀದಿ ಕುತ್ತುಗಳಿರುವ ಸ್ಥಳಗಳನ್ನು ಕೊಳ್ಳಬಾರದು.
9. ಸಾಧ್ಯವಾದಷ್ಟು ಆಗ್ನೇಯ ಸ್ಥಳಗಳನ್ನು ಕೊಳ್ಳದಿರುವುದು ಬಹಳ ಒಳ್ಳೆಯದು.
10. ಪೂರ್ವ, ಈಶಾನ್ಯ, ಉತ್ತರಗಳಲ್ಲಿ ಬಹುಮಹಡಿ ಕಟ್ಟಡಗಳಿದ್ದು, ದಕ್ಷಿಣ, ಪಶ್ಚಿಮ, ನೈಋತ್ಯಗಳಲ್ಲಿ ಮೈದಾನ, ಕ್ರೀಡಾಂಗಣಗಳಿರುವ ಸ್ಥಳವನ್ನು ಕೊಳ್ಳಬಾರದು.


ಪೂರ್ವ

## ಕೊಳ್ಳಬಾರದ ಸ್ಥಳಗಳು




ಪಶ್ಚಿಮ

## ಕೊಳ್ಳಬಹುದಾದ ಸ್ಥಳಗಳು




ಮೇಲೆ ನೋಡುತ್ತಿರುವಂಥ ಚಿತ್ರದ ರೂಪದಲ್ಲಿರುವ ಸ್ಥಳಗಳನ್ನು ನೀವು ಯಾವುದೇ ಭೀತಿ ಇಲ್ಲದೆ ಕೊಳ್ಳಬಹುದು. ಸಾಮಾನ್ಯವಾಗಿ ಇಂಥ ನಿವೇಶನಗಳು ಅದೃಷ್ಟವಂತರಿಗೆ ಮಾತ್ರ ಒಲಿಯುತ್ತಿರುತ್ತವೆ. ಇಂಥ ಸ್ಥಳಗಳು ನಿಮಗೆ ಸಿಗುವಂತಿದ್ದರೆ ತಡಮಾಡದೆ ಕೊಂಡುಕೊಳ್ಳಿ.

### ನಿವೇಶನ, ಮನೆ ಕೊಂಡ ನಂತರ...

1. ಮೊದಲಿಗೆ ಸ್ಥಳವನ್ನು ಶುದ್ಧಿ ಮಾಡಬೇಕು.
2. ಈಶಾನ್ಯದಲ್ಲಿ ಗುಂಡಿ ಇದ್ದರೆ ಅದನ್ನು ಮುಚ್ಚಬಾರದು.
3. ಈಶಾನ್ಯದಲ್ಲಿ ಬಾವಿ ಇದ್ದರೆ ನೀವು ಅದೃಷ್ಟವಂತರು. ಶುಭಕರ, ಶ್ರೇಷ್ಠ.
4. ಈಶಾನ್ಯದಲ್ಲಿ ಮೆಟ್ಟಿಲುಗಳಿದ್ದರೆ ಕೂಡಲೇ ಕೆಡವಿಸಿಬಿಡಿ.
5. ಈಶಾನ್ಯದಲ್ಲಿ ಮುಚ್ಚಿದ ಕೊಠಡಿಗಳಿದ್ದರೆ, ಒಂದು ಕ್ಷಣವೂ ತಡ ಮಾಡದೆ ಕೆಡವಿಬಿಡಿ.
6. ಈಶಾನ್ಯದಲ್ಲಿ ಹಳ್ಳ ಮಾಡಿಕೊಳ್ಳಿ.

7. ಈಶಾನ್ಯದಲ್ಲಿ ಬೋರ್‌ವೆಲ್ ಹಾಕಿಸುವುದು ಬಹಳ ಒಳ್ಳೆಯದು.

8. ಕೊಳಾಯಿ ಗುಂಡಿಯನ್ನು ಈಶಾನ್ಯದಲ್ಲಿ ಇರಿಸಿಕೊಳ್ಳುವುದು ಶ್ರೇಷ್ಠ.

9. ಈಶಾನ್ಯದಲ್ಲಿ ಓಡಾಡಲು ಅನುವಾಗುವಂಥ ಗೇಟನ್ನು ಏರ್ಪಾಟು ಮಾಡಿಕೊಳ್ಳಿ.

10. ಮನೆಗೆ ಈಶಾನ್ಯದಲ್ಲಿ ಬಾಗಿಲು ಇರಿಸಿಕೊಳ್ಳಿ.

11. ಮನೆಯಲ್ಲಿನ ಪ್ರತಿ ಕೊಠಡಿಗೆ ಉಚ್ಚಸ್ಥಾನದಲ್ಲಿ ದ್ವಾರವನ್ನು ನಿರ್ಮಿಸಿಕೊಳ್ಳಿ.

12. ಪ್ರವೇಶ ದ್ವಾರಕ್ಕೂ ಕಾಂಪೌಂಡ್ ಗೇಟ್ ದಿಣ್ಣೆ ಕುತ್ತು ಉಂಟಾಗದಂತೆ ಎಚ್ಚರ ವಹಿಸಿ.

13. ಮನೆಯಲ್ಲೂ ಕೂಡ ಈಶಾನ್ಯ ಕೊಠಡಿ ತಗ್ಗಾಗಿರುವುದು ಶುಭ.

14. ಈಶಾನ್ಯ ಕೊಠಡಿಯಲ್ಲಿ ಹೆಚ್ಚು ಕಿಟಕಿಗಳು ಇರುವಂತೆ ನೋಡಿಕೊಳ್ಳಬೇಕು.

15. ಈಶಾನ್ಯ ಕೊಠಡಿಗೆ ಎಷ್ಟು ಬಾಗಿಲುಗಳಿದ್ದರೂ ತಪ್ಪಿಲ್ಲ.

16. ಶ್ರೀ ಸ್ಥಾನ ಎಂದು ಈಶಾನ್ಯ ಕೊಠಡಿಗೆ ನಾಲ್ಕು ಬಾಗಿಲುಗಳನ್ನು ಇರಿಸಿದರೆ ಮನೆಯಲ್ಲಿ ವಾಸ್ತು ದೋಷಗಳಿದ್ದರೆ ಶುಭ ನೆಡಯುವುದಿಲ್ಲ.

17. ಪೂರ್ವ ಈಶಾನ್ಯ, ಉತ್ತರ ಈಶಾನ್ಯ ಬಾಗಿಲುಗಳನ್ನು ಮುಚ್ಚದೆ, ಓಡಾಟ ಹೆಚ್ಚಿರುವಂತೆ ನೋಡಿಕೊಳ್ಳಬೇಕು.

18. ಪೂರ್ವ ಭಾಗದಲ್ಲಿ ಹೆಚ್ಚು ಖಾಲಿ ಸ್ಥಳ ಇರಿಸಿಕೊಳ್ಳಬೇಕು.

19. ಪೂರ್ವ ಹಳ್ಳವಾಗಿರುವುದು ಶ್ರೇಷ್ಠ

20. ಪೂರ್ವ ಭಾಗದಲ್ಲಿ ಬಾವಿ ಇದ್ದರೆ ಕೇಡೇನಲ್ಲ, ಶುಭ.

21. ಮನೆಯ ಹೊರಗೆ, ಪೂರ್ವ ಸ್ಥಳದಲ್ಲಿ ಮೆಟ್ಟಿಲು ಮನೆಗೆ ಕುತ್ತು ಬರುವಂತೆ ನಿರ್ಮಿಸಿಕೊಳ್ಳಬಾರದು.

22. ಆಗ್ನೇಯ ಬೆಳೆಯದಂತೆ ಎಚ್ಚರಿಕೆ ವಹಿಸಬೇಕು. ಆಗ್ನೇಯ ಬಾಗಿಲುಗಳನ್ನು ತಕ್ಷಣ ತೆಗೆಸಿ, ಗೋಡೆ ಕಟ್ಟಿಸಿಕೊಳ್ಳಬೇಕು.

23. ಪೂರ್ವ ಆಗ್ನೇಯ ಬಾಗಿಲನ್ನೂ ತೆಗೆಸಿ, ಗೋಡೆ ಕಟ್ಟಿಸಬೇಕು.

24. ಆಗ್ನೇಯದಲ್ಲಿರುವ ಬಾಗಿಲನ್ನು ತೆಗೆದುಬಿಡಬಹುದು. ಆದರೆ ಕಿಟಕಿಗಳು ಇರುವುದು ದೋಷವಲ್ಲ. ಆಗ್ನೇಯ ಮೂಲೆ ಮುಚ್ಚಿದಂತೆ ಇರಬಾರದು/ಮುಚ್ಚಿರಬಾರದು.

25. ದಕ್ಷಿಣ ಆಗ್ನೇಯದಲ್ಲಿ ಬಾಗಿಲು ಇರುವುದರಿಂದ ತಪ್ಪೇನಿಲ್ಲ. ಆದರೆ ಪಶ್ಚಿಮ ವಾಯುವ್ಯದಲ್ಲಿ, ದಕ್ಷಿಣ ಆಗ್ನೇಯದಲ್ಲಿ ಎರಡು ಬಾಗಿಲು ಇರುವುದು ಮಾತ್ರ ಒಳ್ಳೆಯದಲ್ಲ. ಹೀಗಿದ್ದಾಗ ಯಾವುದೋ ಒಂದು ದ್ವಾರವನ್ನು ಬಳಸಬೇಕು.

26. ದಕ್ಷಿಣದಲ್ಲಿರುವ ಹಳ್ಳಗಳನ್ನು ಮುಚ್ಚಿಬಿಡಬೇಕು.

27. ದಕ್ಷಿಣ ಭಾಗ ಮನೆಯ ಫ್ಲೋರಿಂಗ್‌ಗಿಂತ(ನೆಲಕ್ಕಿಂತ) ಎತ್ತರವಾಗಿರುವುದು ಶುಭ.

28. ದಕ್ಷಿಣ ಕಾಂಪೌಂಡ್ ದೃಢವಾಗಿಯೂ ಉತ್ತರದ ಕಾಂಪೌಂಡ್‌ಗಿಂತ ಎತ್ತರವಾಗಿರಬೇಕು.

29. ದಕ್ಷಿಣದಲ್ಲಿರುವ ವೃಕ್ಷವನ್ನು ಕಡಿದುಹಾಕಬಾರದು.

30. ದಕ್ಷಿಣ ಭಾಗದಿಂದ ಬಳಸಿದ ನೀರು ಹೊರಗೆ ಹರಿಯಬಾರದು.

31. ದಕ್ಷಿಣದಲ್ಲಿ ವರಾಂಡ ಇರಬಾರದು.

32. ದಕ್ಷಿಣದಲ್ಲಿ ಕಲ್ಲಿನ ಹಾಸುಗಳನ್ನು ನಿರ್ಮಿಸುವುದು ಒಳ್ಳೆಯದು.

33. ನೈಋತ್ಯದಲ್ಲಿ ಉಪಗೃಹವನ್ನು ನಿರ್ಮಿಸಿಕೊಳ್ಳುವುದು ಪ್ರಶಸ್ತ.

34. ನೈಋತ್ಯದಲ್ಲಿರುವ ಕಲ್ಲಿನ ಹಾಸುಗಳನ್ನು ಕೆಡವಬಾರದು.

35. ನೈಋತ್ಯದಲ್ಲಿರುವ ಮರಗಳನ್ನು ಮುಟ್ಟುವುದು ಸಹ ತಪ್ಪು. ಯಾವುದೇ ಪರಿಸ್ಥಿತಿಯಲ್ಲೂ ಅವುಗಳನ್ನು ಕಡಿದು ಹಾಕಬಾರದು.
36. ನೈಋತ್ಯದಲ್ಲಿ ಹಳ್ಳಗಳಿದ್ದರೆ ತಕ್ಷಣ ತುಂಬಿಬಿಡಿ.
37. ನೈಋತ್ಯದಲ್ಲಿ ಕಾಂಪೌಂಡ್ ಶಿಥಿಲಾವಸ್ಥೆಯಲ್ಲಿದ್ದರೆ ಅಥವಾ ಬೀಳುವ ಸ್ಥಿತಿಯಲ್ಲಿದ್ದರೆ ತಕ್ಷಣ ಪುನರ್ ನಿರ್ಮಿಸಿ.
38. ನೈಋತ್ಯದ ಮೂಲಕ ಬಳಸಿದ ನೀರು ಹೊರಗೆ ಹೋಗಬಾರದು.
39. ನೈಋತ್ಯ ಕಾಂಪೌಂಡ್ ಗೋಡೆಗೆ ಗೂಡುಗಳು ಇರಬಾರದು.
40. ಪಶ್ಚಿಮ ಹಳ್ಳ ಇರಬಾರದು.
41. ಪಶ್ಚಿಮ ಕಾಂಪೌಂಡ್ ಗೋಡೆಗೆ ಆತುಕೊಂಡಂತೆ ಕಲ್ಲಿನಹಾಸು ನಿರ್ಮಿಸಬಹುದು.
42. ಪಶ್ಚಿಮ ಕಾಂಪೌಂಡ್ ಗೋಡೆಗೆ ಸೇರಿದಂತೆ ಷೆಡ್ ಇದ್ದರೂ ತಪ್ಪಿಲ್ಲ. ಆದರೆ ಕೆಲವು ಮುನ್ನೆಚ್ಚರಿಕೆ ಅಗತ್ಯ.
43. ಪಶ್ಚಿಮದಲ್ಲಿ ಹೆಚ್ಚು ಖಾಲಿ ಸ್ಥಳ ಇರಬಾರದು.
44. ಪಶ್ಚಿಮದ ಮೂಲಕ ಬಳಕೆಯ ನೀರು ಹೊರಹೋಗಬಾರದು.
45. ಪಶ್ಚಿಮದಲ್ಲಿ ದೊಡ್ಡ ಮರಗಳನ್ನು ಬೆಳೆಸುವುದು ಶ್ರೇಷ್ಠ.
46. ಪಶ್ಚಿಮದಲ್ಲಿ ಫ್ಲೋರಿಂಗ್, ಮನೆಯ ಮುಂದಿನ ಫ್ಲೋರಿಂಗ್‌ಗಿಂತ ಎತ್ತರವಾಗಿರುವುದು ಅತ್ಯಂತ ಶುಭದಾಯಕ.
47. ಪಶ್ಚಿಮದ ಕಾಂಪೌಂಡ್ ಗೋಡೆಗೆ ಅಗತ್ಯವೆನಿಸಿದ ಹೊರತು ಗೂಡು(ಕಪಾಟು)ಗಳನ್ನು ಇರಿಸಬಾರದು.
48. ಮನೆಯ ಪಶ್ಚಿಮ ವಾಯುವ್ಯದಲ್ಲಿ ಕಿಟಕಿ ಇರುವುದು ಶ್ರೇಷ್ಠ
49. ವಾಯುವ್ಯ ಮೂಲೆಯಲ್ಲಿ ಮುಚ್ಚಿದ ಕೊಠಡಿಗಳು ಇರಬಾರದು.
50. ಉತ್ತರ ವಾಯುವ್ಯ ಬೆಳೆಯುವುದು ಮಹಾ ದೋಷ. ಉತ್ತರ ವಾಯುವ್ಯ ಭಾಗದಿಂದ ಓಡಾಡುವುದು ಒಳ್ಳೆಯದಲ್ಲ.
51. ಉತ್ತರ ವಾಯುವ್ಯದಲ್ಲಿ ಹಳ್ಳ ಇರಬಾರದು.
52. ಉತ್ತರ ತುಂಡಾಗಿರಬಾರದು.
53. ಉತ್ತರದ ಬಾಗಿಲು ಒಳ್ಳೆಯದು.
54. ಉತ್ತರದಲ್ಲಿ ಹೆಚ್ಚು ಖಾಲಿ ಸ್ಥಳ ಇರಬೇಕು.
55. ಉತ್ತರ ತಗ್ಗಾಗಿರಬೇಕು.
56. ಬಳಸಿದ ನೀರು ಉತ್ತರದ ಮೂಲಕ ಹೊರಗೆ ಹರಿಯುವ ವಿಚಾರದಲ್ಲಿ ಅಭ್ಯಂತರವಿಲ್ಲ.
57. ಉತ್ತರದಲ್ಲಿ ಲೆಟ್ರಿನ್ ಗುಂಡಿಗಳು... ಇನ್ನಿತರ ಗುಂಡಿಗಳನ್ನು ಏರ್ಪಡಿಸಿಕೊಳ್ಳಬಹುದು.
58. ಗೋಬರ್ ಗ್ಯಾಸ್ ಸ್ಥಾವರಕ್ಕೆ ತಗ್ಗನ್ನು ಮಾತ್ರ ಎಚ್ಚರಿಕೆ ವಹಿಸಿ ನಿರಭ್ಯಂತರವಾಗಿ ನಿರ್ಮಿಸಿಕೊಳ್ಳಬಹುದು.
59. ಉತ್ತರ ಕಾಂಪೌಂಡ್ ಗೋಡೆಗೆ ಎಷ್ಟು ಗೂಡುಗಳಿದ್ದರೂ ತೊಂದರೆ ಇಲ್ಲ.
60. ಉತ್ತರ ಈಶಾನ್ಯ ಓಡಾಟ ಶುಭಪ್ರದ.

ಇನ್ನು ನಿಮಗೆ ಯಾವುದೇ ಕಷ್ಟ ಇರುವುದಿಲ್ಲ. ನಿಮ್ಮ ಕಷ್ಟಗಳನ್ನೆಲ್ಲ ನಿವಾರಿಸಲೆಂದೇ ಶುಭವಾಸ್ತು.ಕಾಮ್... ಇನ್ನು ಭವಿಷ್ಯತ್ತಿನಲ್ಲಿ ಎಲ್ಲವೂ ನೀವು ಬಯಸಿದಂತೆ ನಡೆಯಬೇಕು. ನಿಮ್ಮ ಕನಸುಗಳು ನನಸಾಗಬೇಕು.


ವಾಸ್ತುಶಾಸ್ತ್ರ ನೆರವು ಪಡೆದು ಸಂಪೂರ್ಣ ಸಂತೋಷವನ್ನು ಅನುಭವಿಸಿ. ಮುಖ್ಯವಾಗಿ ನಿಮ್ಮ ಮಕ್ಕಳಿಗಾಗಿ ನೀವು ಪಡುತ್ತಿರುವ ತೊಂದರೆ, ತಾಪತ್ರಯಗಳು ಮತ್ತು ಅವರ ಭವಿಷ್ಯತ್ತಿಗಾಗಿ ನಿರ್ಮಿಸಿಕೊಂಡ ಆಶಯಗಳೆಲ್ಲ ಇನ್ನು ಸಾಕಾರಗೊಳ್ಳಲಿವೆ. ಅದೃಷ್ಟ ನಿಮ್ಮ ಬಳಿಗೆ ಬರುತ್ತದೆ. ವಾಸ್ತುಶಾಸ್ತ್ರದ ಬಗ್ಗೆ ಅರ್ಧಂಬರ್ಧ ತಿಳಿದವರಿಂದ ಮನೆಯ ವಾಸ್ತುವನ್ನು ತೋರಿಸಬೇಡಿ. ಫಲ ಲಭಿಸದೆ ವಾಸ್ತುವಿನ ಮೇಲೆ ಅಪನಂಬಿಕೆ ಮೂಡಲು ಅವಕಾಶವಾಗುತ್ತದೆ. ಉತ್ತಮ ಗುಣಮಟ್ಟವುಳ್ಳ ವಸ್ತುವಿನ ಬೆಲೆ ಹೆಚ್ಚಾಗಿಯೇ ಇರುತ್ತದೆ. ಹಾಗೇ ಉತ್ತಮ ಫಲಗಳನ್ನು ಹೇಳುವ– ನೀಡುವ ವಾಸ್ತುಶಾಸ್ತ್ರಜ್ಞರ ಸಂಭಾವನೆಯೂ ಹೆಚ್ಚಾಗಿರಬಹುದು. ಒಂದು ಬಾರಿ ನೀಡುವ ವಾಸ್ತು ಸಂಭಾವನೆಗೆ ಕೆಲವು ಗೃಹಸ್ಥರು ಹಿಂದುಮುಂದೆ ನೋಡಿ, ವಾಸ್ತುಶಾಸ್ತ್ರದ ಮೇಲೆ ಸ್ವಲ್ಪವೂ ಪರಿಜ್ಞಾನ ಇರದವರಿಂದ ಆಸ್ತಿಯನ್ನು ಪರಿಶೀಲಿಸಿಕೊಳ್ಳುವ ಮೂಲಕ ಭವಿಷ್ಯತ್ತನ್ನು ಕತ್ತಲು ಮಾಡಿಕೊಳ್ಳುತ್ತಿದ್ದಾರೆ. ಈ ವಿಷಯವನ್ನು ತಪ್ಪದೆ ಬರೆಯಬೇಕೆಂದು ಕೆಲವು ವಿದೇಶೀ ಗ್ರಾಹಕರು ತಿಳಿಸಿದ್ದರಿಂದ ನಿಮ್ಮ ಮುಂದೆ ಇದನ್ನು ಪ್ರಸ್ತಾಪಿಸಲಾಗಿದೆ.

ಇದುವರೆಗೆ ನಾನು ವಾಸ್ತುಶಾಸ್ತ್ರದ ಮೇಲೆ 14 ಪುಸ್ತಕಗಳನ್ನು ಬರೆದಿರುವೆ. ಬರೆದಿರುವ ಪುಸ್ತಕಗಳ ಪ್ರತಿಗಳೆಲ್ಲವೂ ಅಂದುಕೊಂಡದ್ದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾಗಿವೆ. ನಾನು ಬರೆದ ಪುಸ್ತಕಗಳನ್ನು ಕೊಂಡವರಿಗೆ ಧನ್ಯವಾದಗಳು. ನಿಮ್ಮ ಅಭಿಮಾನವೇ ನನಗೆ ಬಂಡವಾಳ. ಮನಃಪೂರ್ವಕವಾಗಿ ನಿಮಗೆ ಮತ್ತೊಮ್ಮೆ ಧನ್ಯವಾದಗಳನ್ನು ತಿಳಿಸುತ್ತಿರುವೆ.


ನನ್ನಿಂದ ನೀವು ನಿಮ್ಮ ಮನೆ, ಫ್ಯಾಕ್ಟರಿ, ನೀವು ಕಷ್ಟಪಟ್ಟು ಗಳಿಸಿದ, ಸಂಪಾದಿಸಿದ ಆಸ್ತಿಗಳನ್ನು ತೋರಿಸಿಕೊಳ್ಳಬೇಕೆಂದುಕೊಂಡರೆ ನನ್ನ ಮೊಬೈಲ್ ನಂ. 98481 14778, ಆಂಧ್ರದಿಂದ ಅಥವಾ ಇನ್ನಿತರ ರಾಜ್ಯಗಳಿಂದ ನನ್ನ ಮೊಬೈಲ್‌ಗೆ ಕರೆ ಮಾಡಬೇಕೆಂದುಕೊಂಡರೆ : 0-98481 14778, ವಿದೇಶದಿಂದ ನನ್ನ ಸೆಲ್‌ಗೆ ಕರೆ ಮಾಡಬೇಕೆಂದರೆ 00-91-98481 14778ಗೆ ಕರೆ ಮಾಡಿ ಮೊದಲಿಗೆ ಭೇಟಿಗೆ ದಿನ ನಿಗದಿ ಪಡಿಸಿಕೊಳ್ಳಬಹುದು. ಇ-ಮೇಲ್ ಮೂಲಕವೂ ಸಂಪರ್ಕಿಸ ಬಹುದು. e-mail: peegeess@yahooo.com ಅಥವಾ ಈ ವೆಬ್‌ಸೈಟ್‌ನಲ್ಲೇ ನನ್ನನ್ನು ಹೇಗೆ ಸಂಪರ್ಕಿಸಬಹುದೆಂದು ತಿಳಿಸಲಾಗಿದೆ. ಸೂಚನೆಗಳನ್ನು ಅನುಸರಿಸಬಹುದು. ಇಲ್ಲಿಯವರೆಗೂ ಬಹಳಷ್ಟು ತಾಳ್ಮೆಯಿಂದ ಓದಿದ ನಿಮ್ಮ ಆಸಕ್ತಿಗೆ, ನಿಮ್ಮ ದೂರದೃಷ್ಟಿಗೆ, ನಿಮಗಿರುವ ಮುನ್ನೆಚ್ಚರಿಕೆಗೆ ಧನ್ಯವಾದಗಳನ್ನು ತಿಳಿಯಪಡಿಸುತ್ತಿದ್ದೇನೆ.


**ಸರ್ವೇಜನಾಃ ಸುಖಿನೋಭವಂತು**


ನಮಸ್ತೆ...
ನಿಮ್ಮ
**ಸುರೇಶ್ ಸಿದ್ಧಾಂತಿ**
ಮೊಬೈಲ್ ನಂ. 98481 14778



N
ಪೂರ್ವ ಬೀದಿ
ಬೋರ್ ವೆಲ್
ಮೆಟ್ಟಿಲು
ವರಾಂಡ
ಅಡುಗೆಮನೆ
ದಕ್ಷಿಣ
ಹಾಲ್
ಊಟದ ಕೊಠಡಿ ಮತ್ತು ಪೂಜಾ ಮಂದಿರ
ಉತ್ತರ
God
ಸ್ಟೋರ್ ರೂಂ
ಬಾತ್‌ರೂಂ
ಮಲಗುವ ಕೊಠಡಿ
ಮಲಗುವ ಕೊಠಡಿ
ಪಶ್ಚಿಮ


N
ದಕ್ಷಿಣ ಬೀದಿ
ಹಾಲ್
ಮಲಗುವ
ಕೊಠಡಿ
ಬಾತ್‌ರೂಂ
ಪೂಜಾ ಮಂದಿರ
ಊಟದ
ಮನೆ
ಅಡುಗೆ
ಮನೆ
ಪೂರ್ವ
ಪಶ್ಚಿಮ
ಕೊಳವೆ ಬಾವಿ
ಉತ್ತರ


N
ಪೂರ್ವ
ಬೋರ್ ವೆಲ್
ಮೆಟ್ಟಿಲು
ವಾಯು ವರಂಡಾ
ಅಡುಗೆ ಮನೆ
ಊಟದ ಮನೆ
ಹಾಲ್
ಉತ್ತರ
ದಕ್ಷಿಣ
ಪೂಜಾ ಕೊಠಡಿ
ಸ್ಟೋರ್ ರೂಂ
ಬಾತ್‌ರೂಂ
ಸಿಟ್ಟಿಂಗ್ ರೂಂ
ಮಲಗುವ ಕೋಣೆ
ಪಶ್ಚಿಮ ಬೀದಿ


N
ಉತ್ತರ ಬೀದಿ
ಬೋರ್ ವೆಲ್
ದೇವರ ಮನೆ
ಹಾಲ್
ಮಲಗುವ ಕೊಠಡಿ
ಮಲಗುವ ಕೊಠಡಿ
ಅಡುಗೆ ಮನೆ ಮತ್ತು ಊಟದ ಮನೆ
ಪಶ್ಚಿಮ
ಪೂರ್ವ
ದಕ್ಷಿಣ